ನಿನ್ನನ್ನು..." ಎಂದೆಲ್ಲ ಸಿಕ್ಕಾಪಟ್ಟೆ ಬೈಯಲು ಶುರುವಿಟ್ಟುಕೊಂಡ ಕಾಲ್ ಮಾಡಿದಾತ. ಶಿವಣ್ಣನವರೇ ಇರಬೇಕೆಂದು "ಹಲೋ... ಹಲೋ... ಹಲೋ ಕೇಳಿಸೋಲ್ಲ ಸಾರ್" ಅನ್ನುತ್ತ ಅರ್ಧದಲ್ಲೇ ಫೋನು ಕಟ್ ಮಾಡಿದರು ಸಂಪಾದಕರು.

"ಸರ್, ಒಂದು ಕಾಲ್ ಇದೆ, ಮಹಿಳಾ ಸಮ್ಮಾನ್ ಸಂಸ್ಥೆಯ ಸದಸ್ಯೆಯಂತೆ. ಕನೆಕ್ಟ್ ಮಾಡ್ಲಾ?" ಅಂದಳು ಆಪರೇಟರ್.

"ಕೊಡು" ಅಂದರು ಸಂಪಾದಕರು. "ರೀ ಸಂಪಾದಕರೇ... ಮಾನ ಮರ್ಯಾದೆ ಇಲ್ಲದೆ ಜಗಳಾಡುತ್ತಿರೋ ಹೆಣ್ಮಕ್ಕಳ ಫೋಟೊ ಹಾಕುತ್ತಿದ್ದೀರಲ್ಲ... ಅದೂ ರವಕೆ ಹರಿದು ಬ್ರಾ ಪಟ್ಟಿ ಕಾಣಿಸುವಂತಾದ್ದು... ನಾನು ವಕೀಲೆ, ನಿಮ್ಮನ್ನು ಹೀಗೆಯೇ ಬಿಡುವುದಿಲ್ಲ. ಎಲ್ಲರೂ ಓದುವ ಪತ್ರಿಕೆಯಲ್ಲಿ ಇಂತಹ ಫೋಟೊ ಪ್ರದರ್ಶಿಸಿ ಮಾನ ತೆಗೆದಿದ್ದೀರಿ. ನಿಮ್ಮ ಮೇಲೆ ಮಹಿಳಾ ಆಯೋಗಕ್ಕೆ ದೂರು ನೀಡುತ್ತೇನೆ." ಕೆಂಪು ಬಟ್ಟೆ ಕಂಡ ಗೂಳಿಯಂತೆ ನೇರ ಆಕ್ರಮಣಕ್ಕಿಳಿದಿದ್ದರು ಆಕೆ. ವಾರ್ತೆ ಎಲ್ಲೆಲ್ಲಿ ಮುಟ್ಟಬೇಕೋ ಅಲ್ಲಿಗೆಲ್ಲ ಹೋಗಿದೆ! ಒಳಗೊಳಗೇ ಸಂತಸ ಪಟ್ಟುಕೊಂಡರು ಸಂಪಾದಕರು.

"ಮೇಡಮ್, ಸ್ವಲ್ಪ ಸಮಾಧಾನ ಮಾಡಿಕೊಳ್ಳಿ. ಜಗಳವಾಗಿದೆ ಎನ್ನುವುದನ್ನು ತೋರಿಸಲು ಹರಿದ ಬಟ್ಟೆಯ ಫೋಟೋ ಹಾಕಿದ್ದು ನಿಜ. ಆದರೆ ಅದರ ಒಳಗಿಂದ ಏನೆಲ್ಲ ಕಾಣಿಸುತ್ತಿದೆ ಎಂದು ದುರ್ಬೀನು ಇಟ್ಟು ನೋಡಿಲ್ಲ ನಾವು. ಇಬ್ಬರು ಹೆಣ್ಮಕ್ಕಳಿಗೆ ಮೋಸ ಮಾಡಿ ಈ ಪರಿಸ್ಥಿತಿ ತಂದಿಟ್ಟ ಎಮ್ಮೆಲ್ಲೆ ಬಗೆಗೆ ನಿಮ್ಮದೇನೂ ಆಕ್ರೋಶ ಇಲ್ಲ. ಪತ್ರಿಕೆಯಲ್ಲಿ ಹಾಕಿದ ಫೋಟೊ ಬಗ್ಗೆ ನಿಮಗೆ ಆಕ್ರೋಶ... ಈ ಬಗ್ಗೆ ನೀವು ಮಹಿಳಾ ಆಯೋಗಕ್ಕೆ ಕಂಪ್ಲೇಂಟ್ ಕೊಡುವುದಿದ್ದರೆ ಧಾರಾಳವಾಗಿ ಕೊಡಿ, ನಮ್ಮದೇನೂ ಅಭ್ಯಂತರವಿಲ್ಲ" ಎನ್ನುತ್ತ ಫೋನ್ ಇಟ್ಟುಬಿಟ್ಟರು.

ಅಷ್ಟು ಹೊತ್ತಿಗೆ ಕ್ಯಾಂಟೀನ್ ಹುಡುಗ ಚಹಾ ತಂದಿತ್ತ. ಸಂಪಾದಕರು ಚಹಾ ಹೀರುತ್ತ ತಮ್ಮ ಇಮೇಲು, ಟ್ವಿಟರು, ಫೇಸ್‌ಬುಕ್ಕು ಇವನ್ನೆಲ್ಲ ನೋಡುತ್ತ ಕುಳಿತಿದ್ದರು. ಭಲೇ ಶಹಭಾಷ್ ಅಂದವರೇ ಬಹುತೇಕ ಮಂದಿ. ಅಲ್ಲಲ್ಲಿ ಕೆಲವರು "ಯಾರದ್ದೇ ಆಗಲಿ, ಖಾಸಗಿ ಬದುಕಿಗೆ ಕೈ ಹಾಕಬೇಡಿ" ಅಂತ ಹಿತನುಡಿ ಬರೆದಿದ್ದರು. ಒಬ್ಬರಂತೂ "ರಾಜಕಾರಣಿಗಳ ಖಾಸಗಿ ಬದುಕಿನ ಅವ್ಯವಹಾರಗಳ ಬಗೆಗೆ ಬರೆಯಲು ಹೊರಟರೆ ನಿಮ್ಮ ಪೇಪರನ್ನು ಆರರಿಂದ ಹತ್ತುಪುಟಕ್ಕೆ ವಿಸ್ತರಿಸಬೇಕಾಗುತ್ತದೆ!... ಆಸಕ್ತಿಯಿದ್ದರೆ ಹೇಳಿ... ನಾನು ಒಬ್ಬೊಬ್ಬರದೇ ಜಾತಕ ಕಳುಹಿಸುತ್ತೇನೆ" ಅಂತ ಬರೆದಿದ್ದರು. ಮೂರ್ನಾಲ್ಕು ಮೆಸೇಜುಗಳಲ್ಲಿ ಮಾತ್ರ ಅಸಭ್ಯ ಭಾಷೆ ಬಳಸಿ

